**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ**

**ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ**

**ಸಿಸಿ ಸಂಖ್ಯೆ: 222/2023**

ಚಾ.ಸಾ-13, ಪ್ರಾ.ಸಾ-04

| | | |
|---|---|---|
| ಹೆಸರು | : | ಅಶೋಕ್‌ಕುಮಾರ್ |
| ತಂದೆಯ ಹೆಸರು | : | ಲೇಟ್ ಬೈರಪ್ಪ |
| ವಯಸ್ಸು | : | 61 |
| ವೃತ್ತಿ | : | ನಿವೃತ್ತ ಪೊಲೀಸ್ ಉಪನಿರೀಕ್ಷಕರು |
| ವಾಸ | : | ಮೈಸೂರು |

**ದಿನಾಂಕ 07.03.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

[

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ನಾನು ತಿ. ನರಸೀಪುರ ಪೊಲೀಸ್ ಠಾಣೆಯಲ್ಲಿ 2022 ರಿಂದ 2025 ರವರೆಗೆ ಪೊಲೀಸ್ ಉಪ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೆನು.

ದಿನಾಂಕ 25.01.2023 ರಂದು ಬೆಳಿಗ್ಗೆ 10.35 ಗಂಟೆ ಸಮಯದಲ್ಲಿ ನಾನು ಠಾಣಾಧಿಕಾರಿಯಾಗಿದ್ದಾಗ ಪ್ರಾಸಾ-1 ರವರು ಲಿಖಿತ ದೂರನ್ನು ನೀಡಿದ್ದು, ಅದನ್ನು ಸ್ವೀಕರಿಸಿರುತ್ತೇನೆ. ಅದನ್ನು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ಗುರುತಿಸಿರುತ್ತೇನೆ. ಅದು ಈಗಾಗಲೇ ನಿಪಿ.1 ಎಂದು ಗುರುತಿಸಲ್ಪಟ್ಟಿದ್ದು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ.1(ಬಿ) ಎಂದು ಗುರುತಿಸಲಾಯಿತು.

ಅದರ ಆಧಾರದ ಮೇಲೆ ಪ್ರಥಮ ವರ್ತಮಾನ ವರದಿಯನ್ನು ಅಪರಾಧ ಸಂಖ್ಯೆ 24/2023 ರಲ್ಲಿ ದಾಖಲಿಸಿ, ನ್ಯಾಯಾಲಯಕ್ಕೆ ಮತ್ತು

ಮೇಲಾಧಿಕಾರಿಗಳಿಗೆ ಸಲ್ಲಿಸಿರುತ್ತೇನೆ. ಅದನ್ನು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ಗುರುತಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ.6 ಮತ್ತು 6(ಎ) ಎಂದು ಗುರುತಿಸಲಾಯಿತು.

ಅದೇ ದಿನ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪ್ರಾಸಾ–1 ರವರು ತೋರಿಸಿದ ಮೇರೆಗೆ ಘಟನಾ ಸ್ಥಳದಲ್ಲಿ ಪಂಚನಾಮವನ್ನು ಚಾಸಾ–2 ಮತ್ತು ಪ್ರಾಸಾ–2 ರವರ ಸಮಕ್ಷಮ ಬೆಳಿಗ್ಗೆ 11.30 ರಿಂದ ಮಧ್ಯಾಹ್ನ 12.30 ಗಂಟೆಯವರೆಗೆ ಜರುಗಿಸಿರುತ್ತೇನೆ. ಅದನ್ನು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ಗುರುತಿಸಿರುತ್ತೇನೆ. ಅದು ಈಗಾಗಲೇ ನಿಪಿ.2 ಎಂದು ಗುರುತಿಸಲ್ಪಟ್ಟಿದ್ದು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ.2(ಸಿ) ಎಂದು ಗುರುತಿಸಲಾಯಿತು.

ಪ್ರಕರಣದ ಕಡತವನ್ನು ಮುಂದಿನ ತನಿಖೆಗೆ ಚಾಸಾ–14 ರವರಿಗೆ ನೀಡಿರುತ್ತೇನೆ.

**ಪಾಟೀ ಸವಾಲು : ಶ್ರೀ ಎಂ.ಆರ್. ವಕೀಲರಿಂದ 2ನೇ ಆರೋಪಿತನ ಪರವಾಗಿ**

ದೂರನ್ನು ನೀಡಲು ಪ್ರಾಸಾ–1 ರವರು ಬಂದಾಗ ಅವರ ಜೊತೆ ಅವರ ಗಂಡ ಇದ್ದರು. ದೂರನ್ನು ಪ್ರಾಸಾ–1 ರವರು ಬರೆದುಕೊಂಡು ಬಂದಿದ್ದರು. ದೂರಿನಲ್ಲಿ ಯಾರು ಕಳವು ಮಾಡಿದ್ದಾರೆಂದು ಹೇಳಿಲ್ಲ ಎಂದರೆ ಸರಿ. ಪಂಚನಾಮವನ್ನು ಜರುಗಿಸಲು ದೂರನ್ನು ಸ್ವೀಕರಿಸಿದ ದಿನ ಬೆಳಿಗ್ಗೆ 11.30 ಗಂಟೆಗೆ ಹೋಗಿದ್ದೆವು. ಪಂಚರಿಗೆ ನೋಟೀಸ್ ನೀಡಿರಲಿಲ್ಲ. ಪಂಚನಾಮವನ್ನು ನನ್ನ ಅನುಕೂಲಕ್ಕೆ ತಕ್ಕಹಾಗೇ ಬರೆದಿದ್ದು, ಅದನ್ನು ಸ್ಥಳದಲ್ಲಿ ಜರುಗಿಸಿದ್ದೆ ಎಂದು

ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚರ ವಿಳಾಸವನ್ನು ಕೇಳಿದ್ದೀರಾ ಎಂದರೆ ಅವರ ಹೆಸರುಗಳನ್ನು ಕೇಳಿದ್ದೆವು.

**ಮರು ವಿಚಾರಣೆ ಇಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ., ತಿ.ನರಸೀಪುರ**